ಅಲ್ಲಿದ್ದ ಶಿಶುಪಾಲನಿಗೆ ಇದನ್ನು ಸಹಿಸಲಾಗಲಿಲ್ಲ. ಅವನಿಗೂ ಕೃಷ್ಣನ ಮೇಲೆ ದ್ವೇಷವಿತ್ತು.

ತುಂಬಿದ ಸಭೆಯಲ್ಲಿ ಶಿಶುಪಾಲನು ಶ್ರೀಕೃಷ್ಣನನ್ನು ಹೀಯಾಳಿಸಿ ನಿಂದಿಸತೊಡಗಿದನು. ಶ್ರೀಕೃಷ್ಣನು ಅದನ್ನು ಕೇಳಿ ಸಹಿಸಲಾಗದೆ, ಕೊನೆಗೆ ತನ್ನ ಚಕ್ರದಿಂದ ಶಿಶುಪಾಲನ ತಲೆಯನ್ನು ಕಡಿದುಹಾಕಿದನು. ನಂತರ ಧರ್ಮರಾಯನು ವಿಧಿಪೂರ್ವಕವಾಗಿ ಯಾಗವನ್ನು ಮುಗಿಸಿದನು. ಎಲ್ಲರಿಗೂ ಸಂತಸವಾಯಿತು. ಆದರೆ ದುರ್ಯೋಧನನಿಗೆ ಮಾತ್ರ ಪಾಂಡವರ ವೈಭವವನ್ನು ಕಂಡು ಸಂಕಟವಾಗಿ, ಅಪಮಾನದಿಂದ ಅವನು ಹಸ್ತಿನಾವತಿಗೆ ಹಿಂತಿರುಗಿದನು.

ಹಸ್ತಿನಾವತಿಗೆ ಬಂದ ದುರ್ಯೋಧನನಿಗೆ ಪಾಂಡವರ ಮೇಲೆ, ಅದರಲ್ಲೂ ದ್ರೌಪದಿಯ ಮೇಲೆ ಕೋಪವುಂಟಾಗಿತ್ತು. ಇಂದ್ರಪ್ರಸ್ಥದಲ್ಲಿ ದುರ್ಯೋಧನನು ಮೂರ್ಖನಂತೆ ನಡೆದುಕೊಳ್ಳುತ್ತಿದ್ದಾಗ, ಇತರರೊಂದಿಗೆ ಅಪಹಾಸ್ಯಕ್ಕೊಳಗಾದ ದುರ್ಯೋಧನನನ್ನು ದ್ರೌಪದಿಯು ಕಂಡು ನಕ್ಕಿದ್ದಳು. ಈ ಅಪಮಾನವನ್ನು ದುರ್ಯೋಧನನನ್ನು ಸಹಿಸದಾದನು. ಪಾಂಡವರೊಂದಿಗೆ ಜೂಜಾಟವನ್ನು ಏರ್ಪಡಿಸಿ, ಮೋಸದ ಸಂಚಿನಿಂದ ಅವರನ್ನು ಸೋಲಿಸಿದನು. ಅದಲ್ಲದೆ ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಅಪಮಾನಗೊಳಿಸಿದನು. ಸೋತ ಪಾಂಡವರಿಗೆ ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸವನ್ನು ವಿಧಿಸಿ, ಅವರನ್ನು ಅರಣ್ಯಕ್ಕೆ ಅಟ್ಟಿದನು.

ವನವಾಸದಲ್ಲಿದ್ದ ಪಾಂಡವರಿಗೆ ಶ್ರೀಕೃಷ್ಣನು ರಕ್ಷೆಯಾಗಿ ನಿಂತನು. ಅವರ ಕಷ್ಟಸುಖಗಳಿಗೆ ಸ್ಪಂದಿಸುತ್ತಾ ಅವರಿಗೆ ನೆರಳಾಗಿ ಕಾಪಾಡಿದನು. ಅರಣ್ಯವಾಸದ ನಂತರ ರಾಜ್ಯವನ್ನು ಪಾಂಡವರಿಗೆ ಕೊಡಿಸಲು, ಸ್ವತಃ ತಾನೇ ರಾಯಭಾರಿಯಾಗಿ ದುರ್ಯೋಧನನ ಬಳಿಗೆ ಹೋದನು. ಆದರೆ ಫಲಿತಾಂಶ ನಿರಾಶಾದಾಯಕವಾಗಿತ್ತು. ಕೌರವ ಪಾಂಡವರ ನಡುವೆ ಉಂಟಾಗಿದ್ದ ವೈರತ್ವ ಮತ್ತೆ ಅವರು ಒಂದಾಗದಂತೆ ಮಾಡಿದ್ದಲ್ಲದೆ, ಯುದ್ಧ ಅನಿವಾರ್ಯವೆನಿಸಿತ್ತು. ಯುದ್ಧದಲ್ಲಿ ಶಸ್ತ್ರತ್ಯಾಗ ಮಾಡಿ ಕುಳಿತ ಅರ್ಜುನನಿಗೆ ಶ್ರೀಕೃಷ್ಣನು ಭಗವದ್ಗೀತೆಯ ಸಂದೇಶವನ್ನು ತಲುಪಿಸಿ, ಯುದ್ಧಕ್ಕೆ ಮತ್ತು ಧರ್ಮಕ್ಕೆ ವಿಜಯವಾಗುವಂತೆ ಮಾಡಿದನು. ಅನಂತರ ಹಿಂದೆ ತನ್ನ ಗುರುಗಳ ಆಶ್ರಮದಲ್ಲಿ ತನಗೆ ಸ್ನೇಹಿತನಾಗಿದ್ದ ಸುದಾಮನು ಅವನನ್ನು ಕಾಣಲು ಬಂದಾಗ ಶ್ರೀಕೃಷ್ಣನು ಅವನನ್ನು ಆದರಿಸಿ ಸತ್ಕರಿಸಿದನು. ಅವನು ಕೇಳದಿದ್ದರೂ ಅವನಿಗೆ ಸಾಕಷ್ಟು ಹಣ, ಸಂಪತ್ತು, ಐಶ್ವರ್ಯ ಎಲ್ಲವನ್ನೂ ನೀಡಿದನು.

**ಹರಿಸರ್ವೋತ್ತಮ :** ಒಮ್ಮೆ ಸರಸ್ವತೀ ನದಿಯ ತೀರದಲ್ಲಿ ಋಷಿಮುನಿಗಳು ಸತ್ರಯಾಗವನ್ನು ಮಾಡುತ್ತಿದ್ದರು. ಅಲ್ಲಿ ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರು ಎಂಬ ಚರ್ಚೆಯಾಯಿತು. ಅಲ್ಲಿದ್ದ ಎಲ್ಲರೂ ಅವರಿಗೆಲ್ಲ ಹಿರಿಯರಾಗಿದ್ದ ಭೃಗು ಮಹರ್ಷಿಗಳ ಅಭಿಪ್ರಾಯವನ್ನು ಕೇಳಿದರು. ಅದಕ್ಕೆ ಅವರು 'ನಾನು ಪರೀಕ್ಷಿಸದೆ ಏನನ್ನೂ ಹೇಳಲಾರೆ' ಎಂದು ಹೇಳಿ ಸತ್ಯಲೋಕಕ್ಕೆ ತೆರಳಿದರು. ಬ್ರಹ್ಮನು ಅವರನ್ನು ಆದರಿಸದೆ ಮೌನವಾಗಿದ್ದನು. ನಂತರ ಕೈಲಾಸಕ್ಕೆ ಹೋದಾಗ ಅಲ್ಲಿ ರುದ್ರನು ಭೃಗುಮುನಿಗಳನ್ನು ಆಲಿಂಗಿಸಲು ಹೋದನು. ಭೃಗುಮಹರ್ಷಿ ಅವನನ್ನು ಅಲ್ಲಿಯೇ ತಡೆದು ಹೊರನಡೆದರು. ಅನಂತರ ಅವರು ವೈಕುಂಠಕ್ಕೆ ಬಂದಾಗ ಅಲ್ಲಿ ವಿಷ್ಣು ನಿದ್ರಿಸುತ್ತಿದ್ದನು. ಪಕ್ಕದಲ್ಲಿ ಲಕ್ಷ್ಮಿಯು ವಿಷ್ಣುವಿನ ಕಾಲನ್ನು ಒತ್ತುತ್ತಿದ್ದಳು; ಅಲ್ಲಿಗೆ ಬಂದ ಭೃಗುಮಹರ್ಷಿಯನ್ನು ಅವಳು ಗಮನಿಸಲಿಲ್ಲ. ಭೃಗುಮಹರ್ಷಿಗೆ ಕೋಪಬಂದು, ವಿಷ್ಣುವಿನ ಎದೆಗೆ ಅವರು ಒದ್ದರು. ತಕ್ಷಣವೇ ಶ್ರೀಹರಿಯು ಎದ್ದು, ತಾಳ್ಮೆಯಿಂದ ಅವರನ್ನು ಸತ್ಕರಿಸಿ ಉಪಚರಿಸಿದನು. ಕೊನೆಗೆ ಭೃಗುಮಹರ್ಷಿ ಯಾಗಸ್ಥಳಕ್ಕೆ ಬಂದು ಶ್ರೀಹರಿಯೇ ಸರ್ವೋತ್ತಮನೆಂದು ಸಾರಿದರು.

## ಶ್ರೀರಾಮಕೃಷ್ಣರು ಹೇಳಿದ ಗಣೇಶನ ಕಥೆ



ಗಣೇಶ ಒಂದು ದಿನ ಆಟವಾಡುತ್ತಿದ್ದಾಗ ಒಂದು ಬೆಕ್ಕನ್ನು ಪೀಡಿಸಿ, ಚೆನ್ನಾಗಿ ಹೊಡೆದು ಗಾಯಮಾಡಿದನು. ಅನಂತರ ಪಾರ್ವತಿಯ ಬಳಿಗೆ ಬಂದಾಗ ಅವಳ ಮೈಮೇಲೆಲ್ಲ ಗಾಯವಿದ್ದುದನ್ನು ಕಂಡನು. ದುಃಖಿತನಾದ ಗಣೇಶ ಅದಕ್ಕೆ ಕಾರಣವನ್ನು ಕೇಳಿದಾಗ ತಾಯಿ ಪಾರ್ವತಿ, 'ನನ್ನ ಈ ದುರವಸ್ಥೆಗೆ ನೀನೇ ಕಾರಣ' ಎಂದಳು. ಗಣೇಶನಿಗೆ ಏನೂ ಅರ್ಥವಾಗಲಿಲ್ಲ. ಆಗ ಪಾರ್ವತಿ, 'ಇಂದು ನೀನು ಯಾವುದೋ ಪ್ರಾಣಿಗೆ ಹೊಡೆದಿದ್ದೀಯೇನು?' ಎಂದು ಕೇಳಿದಳು. ಬೆಕ್ಕನ್ನು ತಾನು ಹೊಡೆದ ನೆನಪಾಗಿ, ಅದರ ಮಾಲೀಕನೇ ತನ್ನ ತಾಯಿಯನ್ನು ಹೊಡೆದಿರಬೇಕೆಂದು ಅವನು ಭಾವಿಸಿದ. ಪಶ್ಚಾತ್ತಾಪ ಪಡುತ್ತಾ ಅಳತೊಡಗಿದ ಗಣೇಶನನ್ನು ಸಂತೈಸುತ್ತ ಪಾರ್ವತೀದೇವಿ ಹೇಳಿದಳು, 'ಹಾಗಲ್ಲ ಮಗು; ನನಗಾರೂ ಹೊಡೆಯಲಿಲ್ಲ. ಎಲ್ಲ ಪ್ರಾಣಿಗಳೂ ನನ್ನ ಅಂಶದಿಂದಲೇ ಜನಿಸಿವೆ. ನಾನೇ ಎಲ್ಲ ಪ್ರಾಣಿಗಳ ರೂಪದಲ್ಲಿ ಸಂಚರಿಸುತ್ತೇನೆ. ಶಿವಶಕ್ತಿಗಳ ಹೊರತಾಗಿ ಜಗತ್ತಿನಲ್ಲಿ ಬೇರೇನೂ ಇಲ್ಲ. ಆದ್ದರಿಂದ ಬೆಕ್ಕಿಗೆ ಬಿದ್ದ ಪೆಟ್ಟುಗಳ ಗುರುತು ನನ್ನ ಮೈಯಲ್ಲಿ ಕಾಣಿಸಿಕೊಂಡಿತು.' ತಾಯಿಯ ಪರಮಭಕ್ತನಾಗಿದ್ದ ಗಣೇಶ, ಎಲ್ಲೆಲ್ಲೂ ತಾಯಿಯೇ ಇರುವಳೆಂದು ಅರಿತು, ಚಿರಕಾಲವೂ ಬ್ರಹ್ಮಚಾರಿಯಾಗಿಯೇ ಉಳಿದುಬಿಟ್ಟ. ಜಗತ್ತೆಲ್ಲವೂ ಶಿವಶಕ್ತ್ಯಾತ್ಮಕವೆಂದು ಅರಿತ ಅವನು ಜ್ಞಾನಿಗಳಿಗೆಲ್ಲ ಅಗ್ರಗಣ್ಯನಾದ.

*('ಶ್ರೀರಾಮಕೃಷ್ಣ ಲೀಲಾಪ್ರಸಂಗ' ಗ್ರಂಥದಿಂದ)*



# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

ಡಾ. ಕೆ. ಅನಂತರಾಮು

## ಕ್ರೊಯಿಸಸ್ ಮತ್ತು ಸೋಲಾನ್

ಗಾಣಿಗನು ತನ್ನ ಎಣ್ಣೆಯ ಗಾಣ ತಿರುಗಿಸಲು ಎತ್ತನ್ನು ಕಟ್ಟುತ್ತಾನೆ. ಎತ್ತಿನ ಕೊರಳಿನ ಮೇಲೆ ನೊಗವಿರುತ್ತದೆ. ಆ ನೊಗದ ಮುಂದೆ ಚಾಚಿರುವ ಕೋಲಿಗೆ ಸ್ವಲ್ಪ ಹಸಿರು ಮೇವನ್ನು ಎತ್ತಿನ ಕಣ್ಣಿಗೆ ಕಾಣುವಂತೆ, ಆದರೆ ಎಟುಕದಂತೆ ಕಟ್ಟಿರುತ್ತಾರೆ. ಆ ಹಸಿರನ್ನು ಎಟುಕಿಸಿಕೊಂಡು ಮೇಯುತ್ತೇನೆಂಬ ಆಸೆಯಿಂದ ಎತ್ತು ಮುಂದುಮುಂದಕ್ಕೆ ಹೋಗುತ್ತದೆ. ಆಗ ಆ ಮೇವು ಕೂಡ ಎತ್ತಿಗೆ ಎಟುಕದೆ ಎತ್ತಿನೊಡನೆಯೇ ಮುಂದುಮುಂದಕ್ಕೆ ಹೋಗುತ್ತದೆ. ಎಷ್ಟೇ ಸುತ್ತಿದರೂ ಮೇವು ಮಾತ್ರ ಅದಕ್ಕೆ ದಕ್ಕುವುದಿಲ್ಲ. ಹೀಗೆ ವ್ಯರ್ಥವಾಗಿ ಸುತ್ತಿದ್ದು ಎತ್ತಿಗಾಯಿತು, ಎಣ್ಣೆ ಬಂದದ್ದು ಗಾಣಿಗನಿಗಾಯಿತು. ನಾವೂ ಆ ಗಾಣದ ಎತ್ತಿನಂತೆಯೇ ಪ್ರಕೃತಿ, ಐಶ್ವರ್ಯ, ಮಡದಿ, ಮಕ್ಕಳು ಎಂಬುವವರಿಗೆ ದಾಸರಾಗಿ ಸುಖದ ಭ್ರಾಂತಿಯ ಹಸಿರು ಮೇವನ್ನು ಬೆಂಬತ್ತಿ ಹೋಗುತ್ತಿದ್ದೇವೆ. ನಾವು ಸುಖವನ್ನು ಸಮೀಪಿಸಿದಷ್ಟೂ ಅದು ನಮ್ಮಿಂದ ಎತ್ತಿನ ಮೇವಿನಂತೆ, ಮೃಗಮರೀಚಿಕೆಯಂತೆ ದೂರಸರಿಯುತ್ತಿದೆ. ಈ ಸುಖದುಃಖಗಳ ಮೀಮಾಂಸೆಯ ಹೊತ್ತಿನಲ್ಲಿ, ಸ್ವಾಮಿ ವಿವೇಕಾನಂದರು ಕ್ರೊಯಿಸಸ್ ದೊರೆಯ ಕರುಣಾಜನಕ ಕಥೆಯನ್ನು ಉಪದೇಶಿಸಿದ್ದಾರೆ.

ಪುರಾತನ ಕಾಲದಲ್ಲಿ ಏಷ್ಯಾಮೈನರ್ ಪ್ರಾಂತದಲ್ಲಿ ಕ್ರೊಯಿಸಸ್ ಎಂಬ ದೊರೆಯು ರಾಜ್ಯವಾಳುತ್ತಿದ್ದನು. ಅವನಾದರೋ "ಏಷ್ಯಾಮೈನರ್ ಎಂಬುದು ಅತ್ಯಂತ ಸುಖೀರಾಜ್ಯ, ಕ್ರೊಯಿಸಸ್ ದೊರೆಯಾದ ನಾನೇ ಅತ್ಯಂತ ಸುಖವಂತನಾದ ಮಹಾಪ್ರಭು" ಎಂದು ಜಂಬಪಡುತ್ತಿದ್ದನು. ಒಮ್ಮೆ ಅವನ ರಾಜಭವನಕ್ಕೆ ಸೋಲಾನ್ ಎಂಬ ಜ್ಞಾನಿಯು ಆಗಮಿಸಿದನು. ದೊರೆಯು ಅವನನ್ನು ಗೌರವದಿಂದ ಸ್ವಾಗತಿಸಿ, ಬೇಕಾದಷ್ಟು ವಿಚಾರಗಳನ್ನು ಅವನೊಡನೆ ಹಂಚಿಕೊಂಡನು. ಸುಖದುಃಖಗಳ ಸ್ವರೂಪದ ಮಾತುಗಳು ಬಂದಾಗ ಜ್ಞಾನಿ ಸೋಲಾನನು "ಈ ಜಗತ್ತೊಂದು ದುಃಖದ ಮನೆ, ಸುಖವೆಂಬುದು ಹೀಗೆ ತೋರಿ, ಹಾಗೆ ಹಾರಿ ಹೋಗುತ್ತದೆ. ದುಃಖವೇ ವೇಷಮರೆಸಿಕೊಂಡು ಸುಖದ ರೂಪದಲ್ಲಿ ನಮ್ಮಲ್ಲಿಗೆ ಬರುತ್ತದೆ. ಆದ್ದರಿಂದ ಸುಖವೇ ಕೊನೆಕೊನೆಗೆ ದುಃಖದಲ್ಲಿ ಪರ್ಯವಸಾನವಾಗುತ್ತದೆ. ಎಲ್ಲರ ಮನೆಯ ದೋಸೆಯೂ ತೂತು. ಸುಖಕ್ಕೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು; ಹುಟ್ಟಿಬರಲು ನಮಗೆಲ್ಲ ಇರುವುದು ಒಂದೇ ದಾರಿ. ಸಾಯಲು ಸಾವಿರ ದಾರಿಗಳು. ನನಗೆ ದುಃಖವೆಂಬುದೇ ಇಲ್ಲ, ನಾನು ಸಂಪೂರ್ಣ ಸುಖಿ ಎಂದು ಈ ಜಗತ್ತಿನಲ್ಲಿ ಪ್ರತಿಜ್ಞೆಮಾಡಿ ಹೇಳಬಲ್ಲವರು ಯಾರು ತಾನೆ ಇದ್ದಾರೆ ! ಅಂಥವರನ್ನು ನಾನೆಲ್ಲೂ ಕಂಡಿಲ್ಲ" ಎಂದು ಮುಂತಾಗಿ ಚಿಂತನೆ ನಡೆಸುತ್ತಿದ್ದನು. 'ನಾನು ಅತ್ಯಂತ ಸುಖಿ' ಎಂದು ಹೆಮ್ಮೆಪಡುತ್ತಿದ್ದ ಕ್ರೊಯಿಸಸ್‌ನಿಗೆ ಆ ಮಾತು ರುಚಿಸಲಿಲ್ಲ. ಮಾತಿನ ಮಧ್ಯೆ ಬಾಯಿಹಾಕಿ "ಇದೇನು ಹೀಗೆ ಹೇಳುತ್ತೀರಿ ಸೋಲಾನರೇ, ನಿಮ್ಮದು ಅವಿವೇಕದ ಮಾತು, ನಾನು ಸುಖವಂತನಾಗಿ ನಿಮ್ಮ ಕಣ್ಣಮುಂದೆಯೇ ಇದ್ದೇನೆ; ಪರಮಾನಂದಮೂರ್ತಿಯಾಗಿದ್ದೇನೆ. ಅಷ್ಟೇ ಏಕೆ, ಈ ಜಗತ್ತಿನಲ್ಲಿಯೇ ನಾನು ಅತ್ಯಂತ ಸುಖಿ ಎಂದು ಎದೆತಟ್ಟಿ ಹೇಳುತ್ತೇನೆ" ಎಂದು ದುಡುಕಿ ಮಾತನಾಡಿದನು.

ಆ ಮಾತುಗಳಿಂದ ಸೋಲಾನನು ವಿಚಲಿತನಾಗದೆ, "ಆತುರಬೀಳಬೇಡ ದೊರೆಯೆ, ಸ್ವಲ್ಪ ತಾಳಿಕೋ, ನಿನ್ನ ಜೀವನಯಾತ್ರೆ ಇಂದಿಗೇ ಮುಗಿದು ಹೋಯಿತೇನು? ಚಕ್ರದ ಅರೆಕಾಲುಗಳಂತೆ ಸುಖದುಃಖಗಳು ಒಂದರ ಹಿಂದೊಂದು ಉರುಳುತ್ತಿರುವುದನ್ನು ನೀನು ನೋಡುತ್ತಿಲ್ಲವೇ" ಎಂದು ಎಚ್ಚರಿಕೆಯ ಮಾತನ್ನು ಹೇಳಿ, ಅಲ್ಲಿಂದ ತನ್ನ ದಾರಿ ಹಿಡಿದು ಹೊರಟುಹೋದನು.

ಕಾಲಚಕ್ರ ಹಾಗೆಯೇ ಉರುಳಿತು. ಕ್ರೊಯಿಸಸ್ಸನ ರಾಜ್ಯದ ಮೇಲೆ ಪರ್ಷಿಯಾದೇಶದ ದೊರೆಯು ದೊಡ್ಡ ಸೈನ್ಯದೊಡನೆ ದಂಡೆತ್ತಿ ಬಂದನು. ಕ್ರೊಯಿಸಸ್ಸನು ವೀರಾವೇಶದಿಂದ ಹೋರಾಡಿದನಾದರೂ ಪರ್ಷಿಯನ್ನರ ಮುಂದೆ ಅವನ ಬೇಳೆಬೇಯಲಿಲ್ಲ, ಸೋತು ಸುಣ್ಣವಾಗಿ ಅವರ ಕೈಸೆರೆಯ ಆಳಾದನು. ಆಗ ಪರ್ಷಿಯಾ ದೊರೆಯ ಸೇನಾಧಿಪತಿಯು, "ಈ ಕ್ರೊಯಿಸಸ್ಸನನ್ನು ಏನು ಮಾಡೋಣ ಮಹಾಪ್ರಭು" ಎಂದು ಅಪ್ಪಣೆ ಕೇಳಿದನು. ಯುದ್ಧಮಾಡಿದ ಕ್ರೋಧದಲ್ಲಿಯೇ ತುಂಬಿತುಳುಕುತ್ತಿದ್ದ ಪರ್ಷಿಯಾ ದೊರೆಯು, "ಇವನನ್ನು ಜೀವಸಹಿತ ಬೆಂಕಿಗೆಸೆದು ಸುಟ್ಟುಬಿಡಿ" ಎಂದು ಆಜ್ಞಾಪಿಸಿದನು.

ಕ್ರೊಯಿಸಸ್ಸನನ್ನು ಬೆಂಕಿಗೆಸೆಯಲು ಸಿದ್ಧತೆಗಳಾದುವು. ಆ ದೃಶ್ಯವನ್ನು ವೀಕ್ಷಿಸಲು ದೊರೆಯೇ ಆದಿಯಾಗಿ ದೊಡ್ಡದೊಂದು ಜನಜಂಗುಳಿಯೇ ನೆರೆಯಿತು. ಅಗ್ನಿಜ್ವಾಲೆ ಕ್ರೊಯಿಸಸ್ಸನನ್ನು ನುಂಗಿನೊಣೆಯಲು ತನ್ನ ಕೆನ್ನಾಲಗೆಗಳನ್ನು ಧಗಧಗನೆ ಚಾಚುತ್ತಿತ್ತು. ಅವನ ಕೈಕಾಲುಗಳನ್ನು ಬಿಗಿದು, ರಾಜಭಟರು ಬೆಂಕಿಗೆಸೆಯಲು ಶರೀರವನ್ನು ಅತ್ತಿಂದಿತ್ತ